ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು – 570017
ದೂರವಾಣಿ ಸಂಖ್ಯೆ: 0821- 2343384

CHAMUNDESHWARI ELECTRICITY
SUPPLY CORPORATION LIMITED
(Government of Karnataka undertaking)
Corporate Office,
CESC, Mysuru-570017
Website: www.cescmysore.org
E-mail ID: agmtax@cescmysore.org

Company Identity Number[CIN]:- **U40109KA2004SGCO35177**

CESC/TAX/GST/21/2022-TAX/C4S-1591 ದಿನಾಂಕ: 31 JAN 2023
ಲಗತ್ತು:

## ಸುತ್ತೋಲೆ

**ವಿಷಯ:-** ಜಿ.ಎಸ್.ಟಿ ತೆರಿಗೆಯನ್ನು ಕೇಂದ್ರೀಕೃತವಾಗಿ ಪಾವತಿಸಲು ಮಾಹಿತಿಗಳನ್ನು ಸಲ್ಲಿಸುವ ಬಗ್ಗೆ.

********

ಆರ್ಥಿಕ ವರ್ಷ ಜುಲೈ-2017 ರಿಂದ ಜಿ.ಎಸ್.ಟಿ ಅನುಸ್ಠಾನಗೊಂಡಿದ್ದು, ಪ್ರತಿ ಮಾಹೆ ಗ್ರಾಹಕರಿಂದ ವಸೂಲಾತಿಯಾದ ತೆರಿಗೆ ಹಾಗೂ ಹಿಮ್ಮುಖ ತೆರಿಗೆ ವಿವರಗಳನ್ನು ನಿಗಮದ ಲೆಕ್ಕ ಘಟಕಗಳಿಂದ ತೆರಿಗೆ ಶಾಖೆಗೆ ಜಿ.ಎಸ್.ಟಿ ಪಾವತಿಗಾಗಿ ಇದುವರೆವಿಗೂ ನೀಡಲಾಗುತ್ತಿದೆ.

ಅದರಂತೆ ಮಾಹೆಯ ಅಂತ್ಯಕ್ಕೆ ಉಪ-ವಿಭಾಗ/ಶಾಖಾ ಮಟ್ಟದಲ್ಲಿ ವಸೂಲಾತಿಯಾದ ಜಿ.ಎಸ್.ಟಿ ಮೊತ್ತದ ಮಾಹಿತಿಯನ್ನು ಸಲ್ಲಿಸುವಾಗ, ಇತರೆ ಕಂದಾಯ ರಶೀದಿವಾರು ಮಾಹಿತಿಯನ್ನು ತಂತ್ರಾಂಶದಿಂದ ಡೌನ್ಲೋಡ್ ಮಾಡಿಕೊಂಡು, ನಗದು ವಿಶ್ಲೇಷಣಾ ಪಟ್ಟಿಗೂ ಮತ್ತು ಲೆಕ್ಕ ಶೀರ್ಷಿಕೆಗೆ ಮಾಡಿರುವ ಜಮಾ(ಕ್ರೆಡಿಟ್) ಮೊತ್ತಕ್ಕೂ ಹೊಂದಾಣಿಕೆ ಮಾಡಿಕೊಂಡು ತೆರಿಗೆ ಪಾತಿಗೆ ಸಲ್ಲಿಸುವುದು ವಾಡಿಕೆಯಾಗಿರುತ್ತದೆ. ಆದರೆ, ವಿಭಾಗದ ಹಂತದಲ್ಲಿ ಸಂಬಂಧಪಟ್ಟ ಲೆಕ್ಕ ಶೀರ್ಷಿಕಗಳ ಶೆಡ್ಯೂಲ್‌ಗೆ ಜಮಾ(ಕ್ರೆಡಿಟ್) ಮಾಡಿರುವ ಮೊತ್ತಕ್ಕೂ, ತೆರಿಗೆ ಶಾಖೆಗೆ ಜಿ.ಎಸ್.ಟಿ ಪಾವತಿಗಾಗಿ ನೀಡಿರುವ ಮೊತ್ತಕ್ಕೂ [As per Head wise payment summary report/Misccellaneous Payments report] ಪರಿಶೀಲನೆ ಸಂದರ್ಭದಲ್ಲಿ ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ.

ಆದ್ದರಿಂದ ಮಾಹೆವಾರು ಜಿ.ಎಸ್.ಟಿ ಪಾವತಿಗೆ ಮಾಹಿತಿ ಸಲ್ಲಿಸುವ ಸಂದರ್ಭದಲ್ಲಿ ಈ ಕೆಳಕಂಡಂತೆ ಕ್ರಮವಹಿಸವುದು:

1. ಉಪ-ವಿಭಾಗದಿಂದ ಮಾಹಿತಿ ಪಡೆಯುವ ಸಂದರ್ಭದಲ್ಲಿ, ಆಯಾ ತಿಂಗಳಿನ Headwise payment summary report/Misccellaneous Payments report ಹಾಗೂ ವಿಭಾಗಕ್ಕೆ ಸಲ್ಲಿಸಿರುವ ರಶೀದಿವಾರು ಮಾಹಿತಿಯು ಸರಿ ಇರುವ ಬಗ್ಗೆ ಹಾಗೂ ಹೊಂದಾಣಿಕೆ ಆಗಿರುವ ಬಗ್ಗೆ ಪರಿಶೀಲಿಸುವುದು.
2. ತಾಳೆಯಾದ ಮಾಹಿತಿಯ ಅನ್ವಯ ಎಫ್.ಎಂ.ಎಸ್ ತಂತ್ರಾಂಶದಲ್ಲಿ ಲೆಕ್ಕಶೀರ್ಷಿಕೆ 28.1037, 28.1087, 47.6017, 55 SERIES, 61 SERIES, 62 SERIES, 46.9967, 46.9977 & 46.9987ಗಳಿಗೆ ಜೆ.ವಿ ಹೊರಡಿಸಿ, ಜಿ.ಎಸ್.ಟಿ ಲೆಕ್ಕ ಶೀರ್ಷಿಕೆ **46.9967, 46.9977 & 46.9987ಗಳ** ಶೆಡ್ಯೂಲ್ ಅಪ್‌ಡೇಟ್ ಮಾಡಿ, ನಂತರವೇ ಸದರಿ ರಶೀದಿವಾರು ಜಿ.ಎಸ್.ಟಿ ಮಾಹಿತಿಯನ್ನು ತೆರಿಗೆ ಶಾಖೆಯಿಂದ ಪ್ರತಿ ಮಾಹೆ ಶೇರ್ ಮಾಡಲಾಗುವ ***Google Spreadsheet*** ನಲ್ಲಿ ಪಾವತಿಗಾಗಿ ಸಲ್ಲಿಸುವುದು. [ಜಿ.ಎಸ್.ಟಿ ನೋಂದಣಿ ಸಂಖ್ಯೆ ಹೊಂದಿರುವ ಗ್ರಾಹಾಕರಗೆ ಈಗಾಗಲೇ ನೀಡಿರುವ ನಿರ್ದೇಶನದಂತೆ ತಮ್ಮ ಹಂತದಲ್ಲೇ ನಿಗದಿತ ದಿನಾಂಕದೊಳಗೆ ಈ-ಇನ್ವಾಯ್ಸ್ ಸಿದ್ಧಪಡಿಸುವುದು]
3. ***Google Spreadsheet*** ನಲ್ಲಿ ಒದಗಿಸಲಾದ ಮಾಹಿತಿಯ **Abs-CERT** ಹಾಗೂ **Cash-ABS(D)** ಅನುಬಂಧಗಳನ್ನು ಆಡಿಟ್ ಪರಿಶೀಲನೆಗೆ ಒಳಪಡಿಸಿ, ದೃಢೀಕರಣ ಪಡೆದು ಅನುಬಂಧಗಳನ್ನು ಪ್ರತಿ ಮಾಹೆ ತೆರಿಗೆ ಶಾಖೆಗೆ ಸಲ್ಲಿಸಲು ಸೂಚಿಸಿದೆ.
4. ಟಿಸಿ ದುರಸ್ಥಿ ಹುಂಡಿಗಳಲ್ಲಿ ರದ್ದಿ Buyback ಮೊತ್ತವನ್ನು ಲೆಕ್ಕ ಶೀರ್ಷಿಕೆ:28.1087 ಗೆ ಹಾಗೂ ಜಿ.ಎಸ್.ಟಿ ಮೊತ್ತವನ್ನು ಲೆಕ್ಕಶೀರ್ಷಿಕೆ **46.9977 & 46.9987** ಕ್ಕೆ ಲೆಕ್ಕೀಕರಿಸುವುದು.

ನಂತರ, ಮಾಹೆಯ ಅಂತ್ಯಕ್ಕೆ ಲೆಕ್ಕ ಶೀರ್ಷಿಕೆ: 28.1087 ಯಲ್ಲಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 62.3407ಕ್ಕೆ ವರ್ಗಾಹಿಸಿ, ಕಂಪನಿವಾರು ಈ-ಇನ್ವಾಯ್ಸ್ ಸಿದ್ಧಪಡಿಸಿ, ನಂತರ ತೆರಿಗೆ ಶಾಖೆಗೆ ಬಿ2ಬಿ ಅನುಬಂಧದಲ್ಲಿ ತೆರಿಗೆ ಪಾವತಿಗೆ ಮಾಹಿತಿಯನ್ನು ಸಲ್ಲಿಸಲು ಸೂಚಿಸಿದೆ.

5. ಹಿಮ್ಮುಖ ತೆರಿಗೆ ಬಿಲ್ಲುಗಳನ್ನು ಅದೇ ಮಾಹೆಯ ಅಂತ್ಯದೊಳಗೆ ಪಾಸ್ ಮಾಡಿ, ಸದರಿ ಬಿಲ್ಲುಗಳಿಗೆ ಸಂಬಂಧಿಸಿದ ಜೆ.ವಿ ಯನ್ನು ಹೊರಡಿಸಿ ನಂತರವೇ ಪಾವತಿಗಾಗಿ ಸಲ್ಲಿಸುವಂತೆ ಸೂಚಿಸಿದೆ.

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿ ಮಾಹೆ ತೆರಿಗೆ ಶಾಖೆಗೆ ಸಲ್ಲಿಸುವ ದೃಢೀಕೃತ ಮಾಹಿತಿಯನ್ನು ಅಂತಿಮವೆಂದು ಪರಿಗಣಿಸಲಾಗುವುದು. ಮುಂದುವರೆದು, ಪಾವತಿಗೆ ಸಲ್ಲಿಸಿರುವ ತೆರಿಗೆವಾರು ಮಾಹಿತಿಗೂ ಹಾಗೂ ಸಂಬಂಧಿಸಿದ ತೆರಿಗೆ ಶೆಡ್ಯೂಲ್‌ನಲ್ಲಿ ಆಯಾ ಮಾಹೆಯಾನ ಜಮಾ(ಕ್ರೆಡಿಟ್) ಆಗಿರುವ ಮೊತ್ತಕ್ಕೂ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳೇ ಸೂಕ್ತ ಲಿಖಿತ ವಿವರಣೆ ನೀಡುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿ/ನೌಕರರೇ ನೇರ ಹೊಣೆಗಾರರಾಗುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ,

**ಪ್ರತಿಗಳು:-**

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ, ನಿಗಮ ಕಛೇರಿ, ಮೈಸೂರು, ರವರ ಮಾಹಿತಿಗಾಗಿ.
- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಕಾ ಮತ್ತು ಪಾ ವಲಯ ಕಛೇರಿ, ಮೈಸೂರು/ಹಾಸನ ರವರ ಮಾಹಿತಿಗಾಗಿ.
- ನಿಯಂತ್ರಣಾಧಿಕಾರಿಗಳು, ವಲಯ ಕಛೇರಿಗಳು, ಇವರು ಕಛೇರಿ ತಪಾಸಣೆ ವೇಳೆ ಸದರಿ ಸುತ್ತೋಲೆಯ ಅನುಪಾಲನೆಯ ಬಗ್ಗೆ ಪರಿಶೀಲಿಸುವುದು.
- ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ ಕಛೇರಿ, ಮೈಸೂರು/ಮಂಡ್ಯ/ಚಾಮರಾಜನಗರ-ಕೊಡಗು/ ಹಾಸನ, ಚಾವಿಸನಿನಿ.
- ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ವೃತ್ತ ಕಛೇರಿ, ಮೈಸೂರು/ಮಂಡ್ಯ/ಚಾಮರಾಜನಗರ-ಕೊಡಗು/ ಹಾಸನ, ಚಾವಿಸನಿನಿ- ಇವರು ತಮ್ಮ ಅಧೀನ ಕಛೇರಿಗಳ ತಪಾಸಣೆ ವೇಳೆ ಸದರಿ ಸುತ್ತೋಲೆಯ ಅನುಪಾಲನೆಯ ಬಗ್ಗೆ ಪರಿಶೀಲಿಸುವುದು.
- ಉಪ ಪ್ರಧಾನ ವ್ಯವಸ್ಥಾಪಕರು (ಎಮ್.ಐ.ಎಸ್) ನಿಗಮದ ಅಧಿಕೃತ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
- ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಂ ನಿ) ನಿಗಮ ಕಛೇರಿ, ಚಾವಿಸನಿನಿ. ಮೈಸೂರು.
- ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನೆ, ವಿಭಾಗಗಳು, ಚಾವಿಸನಿನಿ.
- ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನೆ, ವಿಭಾಗಗಳು (ಆಂ ಪ), ಚಾವಿಸನಿನಿ, ಮಾಹೆಯಾನ ನಿಗಮ ಕಛೇರಿಗೆ ದೃಢೀಕೃತ ಪ್ರತಿ ಸಲ್ಲಿಸುವ ಮೊದಲು ಖಚಿತಪಡಿಕೊಳ್ಳಲು ಕ್ರಮ ಕೈಗೊಳ್ಳುವುದು.
- ಮು.ಕ.